220 ಕೆವಿ ವಿದ್ಯುತ್ ಮಾರ್ಗಕ್ಕೆ ವರ್ಗಾಯಿಸಲು ಕ್ರಮ ಜರುಗಿಸಲಾಗುತ್ತಿದೆ ಇದರಿಂದ ಶಿವಮೊಗ್ಗ–ಮೈಸೂರು 220 ಕೆವಿ ವಿದ್ಯುತ್ ಮಾರ್ಗದ ಮೇಲಿನ ಲೋಡ್ ಕಡಿಮೆಗೊಳ್ಳುವುದರಿಂದ, ಮೈಸೂರು ನಗರವೂ ಸೇರಿದಂತೆ ಮೈಸೂರು ತಾಲ್ಲೂಕಿನ ಎಲ್ಲಾ ಪ್ರದೇಶಗಳಲ್ಲಿ ವೋಲ್ಟೇಜ್‌ನಲ್ಲಿ ಸುಧಾರಣೆ ಉಂಟಾಗುವುದು ಈ ಕಾಮಗಾರಿಯನ್ನು ಟರ್ನ್ ಕೀ ಆಧಾರದಲ್ಲಿ ನಿರ್ವಹಿಸಲು ಗುತ್ತಿಗೆದಾರರನ್ನು ಗೊತ್ತುಪಡಿಸಲಾಗಿದ್ದು, ಕೆಲಸವು ಪ್ರಗತಿಯಲ್ಲಿರುತ್ತದೆ, ಹಾಗೂ ಈ ಕಾಮಗಾರಿಯನ್ನು ಮೇ 2004 ರ ಅಂತ್ಯದೊಳಗೆ ಪೂರ್ಣಗೊಳಿಸಲು ನಿರೀಕ್ಷಿಸಲಾಗಿದೆ

2. ಕೇಂದ್ರ ಸರ್ಕಾರ ಸ್ವಾಮ್ಯದ ಪಿ.ಜಿ.ಸಿ.ಐ.ಎಲ್ ಸಂಸ್ಥೆಯು ಬಸ್ತಿಪುರದಲ್ಲಿ ಒಂದು 400 ಕೆವಿ ವಿದ್ಯುತ್ ಸ್ಟೇಷನನ್ನು ನಿರ್ಮಾಣ ಮಡಲಿದ್ದು, ಇದು 2005–06 ರ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ

3 ಮೈಸೂರು ತಾಲ್ಲೂಕಿನ ವಾಜಮಂಗಲದಲ್ಲಿ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ತನ್ನ ಕನ್ಸಲ್ಟೆಂಟ್ ಮೂಲಕ ನಡೆಸಿರುವ ಅಧ್ಯಯನದ ಪ್ರಕಾರ, ಈ ವಿದ್ಯುತ್ ಸಬ್ ಸ್ಟೇಷನ್ 2005–06 ರಲ್ಲಿ ಆಗಬೇಕಾಗಿರುತ್ತದೆ

4 ಮೈಸೂರು ನಗರದ ಎಫ್.ಟಿ.ಎಸ್ ಉಪ ಕೇಂದ್ರದ ನವೀಕರಣ ಮತ್ತು ಸಾಮರ್ಥ್ಯವನ್ನು ಹೆಚ್ಚಳಗೊಳಿಸಲು ಉದ್ದೇಶಿಸಲಾಗಿದೆ

ಇ) ಬಸ್ತಿಪುರದಲ್ಲಿ ಕೆಂದ್ರ ಸರ್ಕಾರ ಸ್ವಾಮ್ಯದ ಪಿ.ಜಿ.ಸಿ.ಐ.ಎಲ್ ಸಂಸ್ಥೆಯು 400 ಕೆವಿ ವಿದ್ಯುತ್ ಸಬ್ ಸ್ಟೇಷನ್ನು ನಿರ್ಮಾಣ ಮಾಡುತ್ತಿರುವುದರಿಂದ, ಇದನ್ನು ಹೊರತುಪಡಿಸಿ ಉಳಿದ ಮೇಲ್ಕಂಡ ಕಾರ್ಯಗಳ ನಿರ್ವಹಣೆಗೆ ತಗಲುವ ಒಟ್ಟು ವೆಚ್ಚ ಸುಮಾರು 31 92 ಕೋಟಿ ರೂ.ಗಳು

ಆನ್ ಲೈನ್ ಲಾಟರಿಯ ಬಗ್ಗೆ

77 (292) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ, ಏಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಧಿಕೃತ ಪರವಾನಗಿ ಮೇಲೆ ಯಾವ ಯಾವ ಕಂಪನಿಯವರು ಆನ್‌ಲೈನ್ ಲಾಟರಿ ನಡೆಸುತ್ತಿದ್ದಾರೆ ಅವರುಗಳ ಪ್ರತಿನಿತ್ಯದ ವಹಿವಾಟಿನ ವಿವರ ನೀಡುವುದು

ಆ) ಅನಧಿಕೃತವಾಗಿ ಯಾವ ಯಾವ ಕಂಪನಿಯವರು ಆನ್‌ಲೈನ್ ಲಾಟರಿ ನಡೆಸುತ್ತಿದ್ದಾರೆ ಅವರುಗಳ ಪ್ರತಿನಿತ್ಯದ ವಹಿವಾಟಿನ ವಿವರ ನೀಡುವುದು

ಇ) ಆನ್‌ಲೈನ್ ಲಾಟರಿ ನಿಷೇಧಿಸಬೇಕೇಂದು ಸಾಕಷ್ಟು ಚಳುವಳಿಗಳು ಪ್ರತಿಭಟನೆಗಳು ಆಗುತ್ತಿದ್ದರೂ ನಿಷೇಧಕ್ಕೆ ಕ್ರಮವಹಿಸಲು ವಿಳಂಬ ನೀಡಿ ಅನುಸರಿಸುತ್ತಿರಲು ಕಾರಣಗಳೇನು?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ, ಏಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು)

ಅ) ಆನ್ ಲೈನ್ ಲಾಟರಿ ನಡೆಸಲು ಕರ್ನಾಟಕ ರಾಜ್ಯ ಸರಕಾರದಿಂದ ಪರವಾನಗಿ ಪಡೆದಿರುವ ಕಂಪನಿ ಒಂದು ಮಾತ್ರ ಇದು ಅಲ್ಟ ಎಂಟರ್‌ಟೈನ್‌ಮೆಂಟ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್

ಮುಂಬೈ ಆಗಿದೆ ಇದರ ಈಗಿನ ಪ್ರತಿನಿತ್ಯದ ವಹಿವಾಟು ಸುಮಾರು ರೂ 75 ರಿಂದ 80 ಲಕ್ಷಗಳಷ್ಟಿದೆ

ಆ) ಅನಧಿಕೃತವಾಗಿ ಯಾವ ಕಂಪನಿಯವರು ಆನ್‌ಲೈನ್ ಲಾಟರಿ ನಡೆಸುತ್ತಿಲ್ಲ, ಕೇಂದ್ರ ಸರ್ಕಾರದ ಲಾಟರಿ ರೆಗ್ಯುಲೇಷನ್ ಕಾಯಿದೆ 1998 ರನ್ವಯ ಕರ್ನಾಟಕ ರಾಜ್ಯವು "ಲಾಟರಿ ಮುಖ್ಯ ವಲಯ" ವಲ್ಲದ ಕಾರಣ ಹೊರರಾಜ್ಯದ ಲಾಟರಿ ಕಂಪನಿಗಳು ನಮ್ಮ ರಾಜ್ಯದಲ್ಲಿ ಆನ್‌ಲೈನ್ ಲಾಟರಿ ನಡೆಸುತ್ತಾರೆ ಇವರ ಪ್ರತಿನಿತ್ಯದ ವಹಿವಾಟಿನ ಮಾಹಿತಿ ಲಭ್ಯವಿರುವುದಿಲ್ಲ

ಇ) ಕರ್ನಾಟಕ ರಾಜ್ಯ ಸರ್ಕಾರವು ಗಣಕೀಕೃತ ನೆಟ್‌ವರ್ಕ್ ಲಾಟರಿ ಪ್ರಾರಂಭಿಸುವ ಮುನ್ನ ಮಾರುಕಟ್ಟೆ ಏಜೆಂಟರೊಂದಿಗೆ 5 ವರ್ಷಗಳ ಒಪ್ಪಂದ ಮಾಡಿಕೊಂಡು ಪರವಾನಗಿ ನೀಡಿದೆ ಆನ್‌ಲೈನ್ ಲಾಟರಿ ನಿಷೇದ ಕುರಿತಂತೆ ಪ್ರತಿಭಟನೆ ಚಳುವಳಿಗಳು ಸರ್ಕಾರದ ಗಮನಕ್ಕೆ ಬಂದಿದ್ದು ಈ ಕುರಿತು ಕೂಲಂಕುಶ ಪರಿಶೀಲನೆ ನಡೆಯುತ್ತಿದೆ

ಬಿ ಡಿ ಎ ಯಿಂದ ಭೂಸ್ವಾಧೀನತೆಯಿಂದ ಕೈ ಬಿಟ್ಟಿರುವ ಪ್ರಕರಣಗಳ ಬಗ್ಗೆ

77 (303) ಶ್ರೀ ಸಿಂಧ್ಯಾ ಪಿ ಜಿ ಆರ್ (ಕನಕಪುರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನತೆಯನ್ನು ಕೈ ಬಿಟ್ಟಿರುವ ಪ್ರಕರಣ ಸಂಖ್ಯೆ ಎಷ್ಟು

ಆ) ಈ ಪ್ರಕರಣಗಳ ಭೂಸ್ವಾಧೀನತೆಯನ್ನು ಕೈ ಬಿಡಲು ಕಾರಣಗಳೇನು, ವಿವರಗಳನ್ನು ನೀಡುವುದು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) 2001ನೇ ಏಪ್ರಿಲ್ ನಿಂದ 16 ಪ್ರಕರಣಗಳು

ಆ) ಭೂಸ್ವಾಧೀನತೆಯಿಂದ ಕೈ ಬಿಡಲಾದ ಒಟ್ಟು 180 ಎಕರೆ 16 ಗುಂಟೆ ಜಮೀನಿನಲ್ಲಿ 111 ಎಕರೆ 09 ಗುಂಟೆ ಜಮೀನಿನ ವಿಸ್ತೀರ್ಣವನ್ನು ಹೊರ ವರ್ತುಲ ರಸ್ತೆಯ ಇಕ್ಕೆಲಗಳಲ್ಲಿ ಭೂಸ್ವಾಧೀನದಿಂದ ಹೊರತುಪಡಿಸಲಾಗಿದೆ 10 ಎಕರೆ 18 ಗುಂಟೆ ವಿಸ್ತೀರ್ಣದ ಜಮೀನನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಪರವಾಗಿ ಸಮಾನಾಂತರ ಅಧಿಸೂಚನೆ ಮಾಡಿದ್ದರಿಂದ ಮತ್ತು ಉಳಿಕೆ 58 ಎಕರೆ 29 ಗುಂಟೆ ಜಮೀನು ಅನಧಿಕೃತ ಕಟ್ಟಡಗಳಿಂದ ಆವೃತ್ತಗೊಂಡಿದ್ದ ಕಾರಣದಿಂದ ಭೂಸ್ವಾಧೀನ ಅಧಿಸೂಚನೆಯಿಂದ ಹೊರತುಪಡಿಸಲಾಗಿದೆ

ಕರ್ನಾಟಕದಲ್ಲಿ ಖಾಲಿ ಇರುವ ಉಪಲೋಕಾಯುಕ್ತ ಹುದ್ದೆಯ ಭರ್ತಿಯ ಬಗ್ಗೆ

80 (295) ಶ್ರೀ ಸೋಮಶೇಖರ್ ಬಿ (ಮಳವಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಲೋಕಾಯುಕ್ತದಲ್ಲಿ ಮಾನ್ಯ ಉಪ ಲೋಕಾಯುಕ್ತರ ಹುದ್ದೆ ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈವರೆವಿಗೂ ತುಂಬದಿರಲು ಕಾರಣಗಳೇನು ವಿವರಗಳನ್ನು ನೀಡುವುದು,